ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಗುತ್ತಿಗೆ ಆಧಾರದ ಮೇಲೆ ಒಬ್ಬರನ್ನು ಜಿಲ್ಲಾಧಿಕಾರಿಗಳು ನೇಮಕ ಮಾಡಿದ್ದಾರೆ. ಅವರು ಕೆಲವು ದಾಖಲೆಗಳನ್ನು ಒದಗಿಸಿಲ್ಲವೆನ್ನುವ ಕಾರಣಕ್ಕಾಗಿ ಇನ್ನೂ ಅವರಿಗೆ ನೇಮಕಾತಿ ಆದೇಶವನ್ನು ಕೊಟ್ಟಿಲ್ಲ, ಅವರು ದಾಖಲೆಗಳನ್ನು ಕೊಟ್ಟ ತಕ್ಷಣ ನೇಮಕ ಮಾಡುತ್ತೇವೆ. ಇನ್ನಿತರ ವೈದ್ಯೇತರ ಹುದ್ದೆಗಳು ಏನಿವೆ ಅವು ಅವರಿಗೆ ಸಂಬಂಧಪಟ್ಟಂತಹ ಗೃಹಗಳು. ಆ ಹುದ್ದೆಗಳನ್ನು ನೇಮಕ ಮಾಡತಕ್ಕಂಥ ಪ್ರಕ್ರಿಯೆ ಅದು ಸಹ ನಡೆಯುತ್ತಿದೆ. ನೇಮಕಾತಿ ಮುಗಿದ ನಂತರ ಅಲ್ಲಿಗೆ ನೇಮಕ ಮಾಡುತ್ತೇವೆ, ಆಗ ಆ ಮನೆಗಳು ಎಲ್ಲಾ ಭರ್ತಿಯಾಗುತ್ತದೆ.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನ ತಾಲ್ಲೂಕು ಕೇಂದ್ರದ ಹಾಸ್ಪಿಟಲ್‌ಗೆ ಸಂಬಂಧಪಟ್ಟಂತೆ 7 ಹುದ್ದೆಗಳು ಇದ್ದು, ಎರಡು ಹುದ್ದೆಗಳು ಖಾಲಿ ಇದ್ದು, ಟೆಕ್ನೀಷಿಯನ್ ಹುದ್ದೆಗೆ ಬೇಕಾದ ಎಲ್ಲಾ ಎಕ್ಸರೇ ಸೌಲಭ್ಯಗಳಿದ್ದರೂ ಸಹ ಒಂದೂವರೆ ವರ್ಷದಿಂದ ಟೆಕ್ನೀಷಿಯನ್ ಇಲ್ಲದೆ ವಿಕ್ಸ ಮತ್ತು ಇತರೆ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಇದರ ಬಗ್ಗೆ ಅಸೆಂಬ್ಲಿಯಲ್ಲಿ ಮೂರುಭಾರಿ ಈ ವಿಷಯವಾಗಿ ಪ್ರಶ್ನೆ ಕೇಳಿದ್ದೇನೆ. ಟೆಕ್ನೀಷಿಯನ್ ಮತ್ತು ಇಬ್ಬರು ಡಾಕ್ಟರ್ಸ್ ಇಲ್ಲ, ದಯಮಾಡಿ ಈ ಎರಡು ಹುದ್ದೆಗಳು ಹಾಗೂ ತಾಲ್ಲೂಕು ಕೇಂದ್ರದ ತಾಲ್ಲೂಕು ಮೆಡಿಕಲ್ ಆಫೀಸರ್ ಏನಿದ್ದಾರೆ ಅವರ ಬಗ್ಗೆ ಸಾಕಷ್ಟು ದೂರುಗಳು ಇದ್ದರೂ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ, ಅವರನ್ನು ಬದಲಾವಣೆ ಕೂಡ ಮಾಡಿಲ್ಲ. ದಯಮಾಡಿ ಈ ಎರಡು ಕೆಲಸಗಳ ಬಗ್ಗೆ ಮಾನ್ಯ ಸಚಿವರು ಕೂಡಲೇ ಕ್ರಮತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ತಾಲ್ಲೂಕು ಆಫೀಸರ್ ಮೇಲೆ ಆಪಾದನೆ ಇದ್ದರೆ ಈಗಲೂ ಬರೆದು ಕೊಡಿ ನಾನು ಖಂಡಿತವಾಗಿ ಕ್ರಮವನ್ನು ಕೈಗೊಳ್ಳುತ್ತೇನೆ. ಏಕೆಂದರೆ ಶಾಸಕರು ಹೇಳಿದ ಆಪಾದನೆಯನ್ನು ನಾನು ತುಚ್ಛೀಕರಿಸುವುದಿಲ್ಲ. ಟೆಕ್ನೀಷಿಯನ್ ಹುದ್ದೆಯ ನೇಮಕಾತಿ ನಡೆಯುತ್ತಿದೆ ಅದು ಪೂರ್ಣವಾದ ಮೇಲೆ ಎಲ್ಲಾ ಕಡೆ ಟೆಕ್ನೀಷಿಯನ್‌ಗಳನ್ನು ಹಾಕುತ್ತೇವೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ

54(416) - ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲಪೇಟೆ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಳ್ಳಿ ಗ್ರಾಮದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರಸ್ತುತ 30 ಹಾಸಿಗೆಯುಳ್ಳ ಆಸ್ಪತ್ರೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಇರುವ ವೈದ್ಯರುಗಳೆಷ್ಟು? ಸದರಿ ಆಸ್ಪತ್ರೆಗೆ ನುರಿತ ವೈದ್ಯರನ್ನು ನಿಯೋಜಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬ ಮಹಿಳಾ ವೈದ್ಯಾಧಿಕಾರಿ ಹಾಗೂ ಒಬ್ಬ ಮಹಿಳಾ ದಂತ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ.

ಒಂದು ಸ್ತ್ರೀರೋಗ ತಜ್ಞತೆಯ ಹುದ್ದೆ ಖಾಲಿ ಇರುತ್ತದೆ.

ಆ) ಗುತ್ತಿಗೆ ಆಧಾರದ ಮೇಲೆ ಯಾವ ವೈದ್ಯರೂ ಕಾರ್ಯ ನಿರ್ವಹಿಸುತ್ತಿಲ್ಲ. ದಿನಾಂಕ: 6-2-03 ರಂದು ಜಿಲ್ಲಾಧಿಕಾರಿಯವರು ಗುತ್ತಿಗೆ ಆಧಾರದ ಮೇಲೆ ಒಬ್ಬ ವೈದ್ಯರನ್ನು ನೇಮಿಸಿಕೊಂಡಿದ್ದಾರೆ. ಆದರೆ ಸದರಿ ಗುತ್ತಿಗೆ ವೈದ್ಯರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಈ ವರ್ಷದ ಸಾಮಾನ್ಯ ವರ್ಗಾವಣೆಯಲ್ಲಿ ನುರಿತ ವೈದ್ಯರನ್ನು ನಿಯೋಜಿಸಲು ಪರಿಗಣಿಸಲಾಗುವುದು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆ ತಾಲ್ಲೂಕಿನ ಕಬ್ಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸುಮಾರು 40 ಹುದ್ದೆಗಳನ್ನು ಸರ್ಕಾರ ಮಂಜೂರು ಮಾಡಿದೆ. ಆದರೆ ಈಗ ಅಲ್ಲಿ ಕಾರ್ಯನಿರ್ವಹಿಸುತ್ತಿರುವವರು ಕೇವಲ 11 ಜನ ನೌಕರರು. 30 ಹುದ್ದೆಗಳು ಖಾಲಿ ಇವೆ. ಆದರ ಪೈಕಿ 4 ವೈದ್ಯರು ಇರಬೇಕು. ಆದರೆ 3 ಜನ ವೈದ್ಯರು ಕೆಲಸವನ್ನು ಈಗ ಮಾಡುತ್ತಿದ್ದಾರೆ. ಮಹಿಳಾ ವೈದ್ಯರು ಇದ್ದಾರೆಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ, ಅಲ್ಲಿ ಯಾರೂ ಈಗ ಮಹಿಳಾ ವೈದ್ಯಾಧಿಕಾರಿಗಳು ಕೆಲಸವನ್ನು ನಿರ್ವಹಿಸುತ್ತಿಲ್ಲ. ದಂತ ವೈದ್ಯರು ಮಹಿಳೆಯರಿದ್ದಾರೆ. 3 ಜನ ತಜ್ಞ ವೈದ್ಯರು ಇರಬೇಕೆಂದು ನಿಮ್ಮ ಆಸ್ಪತ್ರೆಯ ಸ್ಟಾಪ್ ಪ್ಯಾಟರ್ನ್‌ದಲ್ಲಿದೆ. ಆದರೆ ಈಗ ವರ್ಕ್ ಮಾಡುತ್ತಿರುವವರು ಎಂಬಿಬಿಎಸ್ ಡಾಕ್ಟರ್‌ಗಳೇ ಹೊರತು ಸ್ಪೇಷಲಿಸ್ಟ್ ಗಳು ಈಗ ಅಲ್ಲಿ ಯಾರೂ ವರ್ಕ್ ಮಾಡುತ್ತಿಲ್ಲ. 30 ಬೆಡ್ ಆಸ್ಪತ್ರೆಯನ್ನು ಈಗ ಕೆಹೆಚ್‌ಎಸ್‌ಬಿಪಿ ಯಿಂದ ಮಂಜೂರು ಮಾಡಿ ಈಗ ಎಲ್ಲಾ ಕಾಮಗಾರಿ ಪೂರ್ಣಗೊಂಡು ಎಕ್ಯುಪ್‌ಮೆಂಟ್ಸ್ ಎಲ್ಲವನ್ನೂ ಇಟ್ಟಿದ್ದೀರಿ, ಆದರೆ ಅದಕ್ಕೆ ಬೇಕಾದಂಥ ಸಿಬ್ಬಂದಿ ಇಲ್ಲದೆ ಅವೆಲ್ಲಾ ಒಂದು ಶೋಪೀಸ್ ತರಹ ಆಸ್ಪತ್ರೆಯಲ್ಲಿವೆ. ಆದ್ದರಿಂದ ಆ ಆಸ್ಪತ್ರೆಗೆ ಇರಬೇಕಾದಂಥ ಸ್ಟಾಪ್‌ನ್ನು ಹಾಗೂ ಸ್ಪಷಲಿಸ್ಟ್ ಡಾಕ್ಟರ್‌ಗಳನ್ನು ನೇಮಿಸಬೇಕು ಮತ್ತು ಅಲ್ಲಿ ಒಂದು ಆಂಬುಲೆನ್ಸ್ ಇದೆ, ಅದಕ್ಕೆ ಇದ್ದ ಡ್ರೈವರ್ ಅನ್ನು ಜಿಲ್ಲಾ ಪಂಚಾಯಿತಿಯವರು ಓಓಡಿ ಮೇಲೆ ತೆಗೆದುಕೊಂಡು ಪಾಪಸ್ಸು ಕೊಡುತ್ತಿಲ್ಲ. ವೆಹಿಕಲ್ ಇದ್ದರೂ ಸಹ ಅದನ್ನು ಬಳಕೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಲ್ಲಿರುವ ಆಸ್ಪತ್ರೆಯ ನ್ಯೂನ್ಯತೆಗಳು ಏನಿವೆ, ಮಾನ್ಯ ಆರೋಗ್ಯ ಸಚಿವರು ಇದನ್ನು ; ಆದಷ್ಟು ಬೇಗ ಭರ್ತಿ ಮಾಡಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ದಂತವೈದ್ಯರು ಮಹಿಳೆಯರು, ಸ್ತ್ರೀತಜ್ಞ ವೈದ್ಯರು ಹುದ್ದೆ ಖಾಲಿ ಇದೆ, ಆ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ಆದರೆ ಅವರು ಇವತ್ತಿನವರೆಗೆ ಹಾಜರಾಗಲಿಲ್ಲ. ಒಂದುವೇಳೆ ಬರದೇ ಹೋದರೆ ಅದನ್ನು ರದ್ದು ಪಡಿಸಿ ಪುನಃ ಅರ್ಜಿ ಕರೆದು ನೇಮಕ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. ತಜ್ಞರ ಹುದ್ದೆ ಎಲ್ಲಾ ಕಡೆ ಖಾಲಿ ಇದೆ. ಜನ ಸಿಗುತ್ತಿಲ್ಲ, ಸಿಕ್ಕಿದರೆ ನೇಮಕ ಮಾಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರ ಗಮನಕ್ಕೆ, ಯಾರಾದರೂ ಈ ಹುದ್ದೆಗೆ ಬರುವವರು ಇದ್ದರೆ, ನಾನು ನೇಮಕ ಮಾಡಿಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಆಸ್ಪತ್ರೆಯನ್ನು ಕಂಪ್ಲೀಟ್ ಮಾಡಿ ಎಕ್ಯುಪ್‌ಮೆಂಟ್ಸ್‌ಗಳನ್ನು ಇಟ್ಟಿದ್ದಾರೆ. ಅಲ್ಲಿ ಸಿಬ್ಬಂದಿಯ ನೇಮಕಾತಿ ಬಹಳ ನಿಧಾನವಾಗುತ್ತಿದೆ. ಆಸ್ಪತ್ರೆಗಳನ್ನು ಎನಾನ್ಸ್ ಮಾಡಿ 7 ಬೆಡ್ ಇದ್ದದ್ದು 30-50 ಬೆಡ್ ಆಗಿ ಎನಾನ್ಸ್ ಮಾಡಿದ್ದಾರೆ. ಆದರೆ ಅದಕ್ಕೆ ಬೇಕಾದ ಸಿಬ್ಬಂದಿ ಇಲ್ಲದೆ ಈ ಆಸ್ಪತ್ರೆಯಲ್ಲಿ ರೋಗಿಗಳ

ತಪಾಸಣೆ ಸರಿಯಾಗಿ ನಡೆಯದೆ ಸಾಧ್ಯವಾಗುತ್ತಿಲ್ಲ. ಎಕ್ಯುಪ್‌ಮೆಂಟ್ಸ್ ಇದ್ದವುಗಳು ತುಕ್ಕು ಹಿಡಿಯುತ್ತಿವೆ, ಅದಕ್ಕಾಗಿ ಅವುಗಳನ್ನು ತುಂಬಿಸುವ ಕೆಲಸವಾಗಬೇಕು. ಕಬ್ಬಳ್ಳಿಗೆ ಮಾತ್ರ ವಿಶೇಷವಾಗಿ 40 ಸ್ಟಾಪ್‌ಗೆ ಬರೀ 10 ಜನ ಇರುವುದು ಸುಮಾರು 30 ಎ.ಎನ್.ಎಂ. ಹುದ್ದೆಗಳು ಕ್ಲರ್ಕ್ಸ್ ಹುದ್ದೆ ಎಲ್ಲಾ ಖಾಲಿ ಇದ್ದಾವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಇದು ಗುಂಡ್ಲುಪೇಟೆಗೆ ಸಂಬಂಧಪಟ್ಟಿದ್ದು,

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಅಧ್ಯಕ್ಷರೆ, ಇದು ನನಗೆ ಸಂಬಂಧಪಟ್ಟಿದ್ದು. ಈಗ ಕಡೂರಿನಲ್ಲಿ..

ಅಧ್ಯಕ್ಷರು : ತಾವೊಬ್ಬರು ಮಾತನಾಡಿದರೆ, ಎಲ್ಲರೂ ಇದರ ಬಗ್ಗೆ ಮಾತನಾಡಲು ಅವಕಾಶ ಕೇಳುತ್ತಾರೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ನಮ್ಮ ಭಾವನೆಗಳನ್ನು ನಾವು ಎಲ್ಲಿ ಹೇಳಿಕೊಳ್ಳಬೇಕು.

ಅಧ್ಯಕ್ಷರು : ತಮ್ಮ ಭಾವನೆಗಳನ್ನು ರಾಜ್ಯಪಾಲರ ಭಾಷಣದ ಮೇಲೆ ನೀವು ಬೇಕಾದರೆ ಒಂದು ಗಂಟೆಯ ಕಾಲ ಮಾತನಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರ ಗಮನಕ್ಕೆ, ಒಂದು ನಿಮಿಷ ಸರ್. ಇಷ್ಟೊತ್ತಿಗಾಗಲೇ ನಾನು ಮಾತನಾಡಿ ಮುಗಿಸಿ ಬಿಡುತ್ತಿದ್ದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಕಡೂರಿಗೆ ಬಂದಂಥ ಸಂದರ್ಭದಲ್ಲಿ ನಾವು ಬಯೋ ಆಪರೇಟಸ್ ಕೇಳಿದ್ದೆವು. ಅನೆಸ್ತೇಸಿಯಾ ಕೊಡುವುದಕ್ಕೆ ಅದೊಂದು ಉಪಕರಣ. ಅದನ್ನು ಕೊಟ್ಟು 6 ತಿಂಗಳಾದರೂ ಕೂಡ ಅನೆಸ್ತೇಷಿಯಾ ಡಾಕ್ಟರರು ಇನ್ನುವರೆಗೆ ಬಂದಿರುವುದಿಲ್ಲ. ಈಗ ಅದು ಇದ್ದು ಏನು ಉಪಯೋಗ? ವರ್ಲ್ಡ್ ಬ್ಯಾಂಕ್ ಸಿಸ್ಟಮ್‌ನಲ್ಲಿ ಕೆಲವೊಂದು ನಾವು ಕೇಳಿರುವುದನ್ನು ಕೊಡಬಹುದು. ಆದರೆ ಅದನ್ನು ನಡೆಸುವಂಥ ಒಬ್ಬ ವೈದ್ಯರನ್ನು ಕೊಡದಿದ್ದರೆ ಆಪರೇಶನ್ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಅದಷ್ಟು ಬೇಗ ಅನೆಸ್ತೇಷಿಯಾ ಡಾಕ್ಟರ್‌ನ್ನು ಕೊಡುವ ವ್ಯವಸ್ಥೆಯಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೆ ಬೇಕಾದ ವ್ಯವಸ್ಥೆ ಮಾಡೋಣ.

ಅಧ್ಯಕ್ಷರು : ಆಯಿತಾ? ಅದು ಮುಗಿಯಿತು.

ಪಿರಿಯಾಪಟ್ಟಣದಲ್ಲಿನ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

53(550) - **ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ)** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣದಲ್ಲಿರುವ 30 ಹಾಸಿಗೆವುಳ್ಳ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆಯೆ ಹಾಗೂ ಎಷ್ಟು ಹಾಸಿಗೆವುಳ್ಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು.

ಇ) ಅನುಮೋದನೆಯನ್ನು ನೀಡಿದ್ದಲ್ಲಿ ಮೇಲ್ದರ್ಜೆಗೇರಿಸುವ ಕಾರ್ಯ ಎಂದು ಆರಂಭವಾಗಿ ಯಾವಾಗ ಪೂರ್ಣಗೊಳ್ಳುವುದು?